# ಯುವಕ



ನಿರುದ್ಯೋಗಿ ಯುವಕನೊಬ್ಬ ರಸ್ತೆಯಲ್ಲಿ ಸಾಗುತ್ತಿದ್ದ.

ಎದುರಿನಿಂದ ಮಹಿಳೆಯೊಬ್ಬಳು ತನ್ನ ಐದು ವರ್ಷದ ಮಗುವಿನೊಂದಿಗೆ ಬರುತ್ತಿದ್ದಳು. ಮಗುವಿನ ಕಾಲುಗಳಿಗೆ ಚಪ್ಪಲಿಗಳಿರಲಿಲ್ಲ. ಮಗುವಿಗೆ ನೆಗಡಿಯಾಗಿತ್ತು. ನಿರುದ್ಯೋಗಿ ಯುವಕನಿಗೆ ಆ ಮಗುವನ್ನು ನೋಡಿ ತನ್ನ ಬಾಲ್ಯದ ನೆನಪಾಯಿತು.

ಅಷ್ಟರಲ್ಲಿ ಕಾರೊಂದು ತಕ್ಷಣ ಬ್ರೇಕ್ ಹಾಕಿತು. ಯುವಕ ಹೇಗೋ ಪಾರಾದ. ತಪ್ಪು ಅವನದಾಗಿತ್ತು. ಯಾಕೆಂದರೆ, ಅವನು ತನ್ನ ಬಾಲ್ಯವನ್ನು ನೆನಪಿಸಿಕೊಳ್ಳುತ್ತಿದ್ದ...

ಒಬ್ಬ ನಿರುದ್ಯೋಗಿ ಯುವಕನನ್ನು ಪಾರು ಮಾಡಲು ಕಾರಿನ ಮಾಲೀಕನಿಗೆ ತಕ್ಷಣ ಬ್ರೇಕ್ ಹಾಕಲು ಕಷ್ಟಪಡಬೇಕಾಯಿತು. ಇದರಿಂದ ಮಾಲೀಕನ ಸಿಟ್ಟು ನೆತ್ತಿಗೇರಿತು. ಆ ಸಿಟ್ಟನ್ನು ಬೈಗುಳದ ಮೂಲಕ ಹೊರ ಹಾಕಿದರೂ ಅವನ ಸಿಟ್ಟು ಶಮನವಾಗಲಿಲ್ಲ.

ಈಗ ಮಾಲೀಕ ಕಾರಿನಿಂದ ಕೆಳಗಿಳಿದು ಬಂದ. ಅವನು ಹೆದರಿ ಓಡುತ್ತಿದ್ದ ಯುವಕನನ್ನು ಓಡಿಹೋಗಿ ಹಿಡಿದು ಅವನ ಕಪಾಳಕ್ಕೆ ರಾಚಿ ಹೊಡೆದ.

ರಸ್ತೆಯಲ್ಲಿ ಹೋಗುತ್ತಿದ್ದವರಿಗೆ ವಿಷಯ ಅರ್ಥವಾಗಲಿಲ್ಲ. ಅರ್ಥವಾಗುವ ಅವಶ್ಯಕತೆಯೂ ಇರಲಿಲ್ಲ.

ನಂತರ ಕಾರು ಹೊರಟು ಹೋಯಿತು. ಜನರೂ ಹೊರಟು ಹೋದರು.

ಯುವಕ ಲಜ್ಜೆಪಡುತ್ತಾ ಒಂದು ಸಂಕೀರ್ಣ ಗಲ್ಲಿಗೆ ಹೋದ, ಅವನಿಗೆ ಆ ಗಲ್ಲಿಯ ಮೂಲಕ ಹೋಗುವ ಉದ್ದೇಶವಿರಲಿಲ್ಲ. ಆದರೆ, ಅಲ್ಲಿ ಕಾರುಗಳ ಸಂಚಾರವಿರಲಿಲ್ಲ.


**ವಿಷ್ಣು ನಾಗರ್**

'ಹಿಂದೂಸ್ತಾನ್ ಟೈಮ್ಸ್', 'ನವಭಾರತ್ ಟೈಮ್ಸ್' ಪತ್ರಿಕೆಗಳ ಸಂಪಾದಕ ಮತ್ತು ವರದಿಗಾರರಾಗಿ ಕಾರ್ಯ ನಿರ್ವಹಿಸಿರುವ ವಿಷ್ಣು ನಾಗರ್, ಆರು ಕವನ ಸಂಕಲನಗಳು, ಐದು ಕಥಾಸಂಕಲನಗಳು, ನಾಲ್ಕು ಪ್ರಬಂಧ ಸಂಕಲನಗಳು, ಆರು ವ್ಯಂಗ್ಯ ಸಂಕಲನಗಳು, ಒಂದು ಕಾದಂಬರಿ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳಿಂದ ಹಿಂದಿ ಓದುಗರಿಗೆ ಪರಿಚಿತರು. ನವಸಾಕ್ಷರರಿಗೆ ಸುಮಾರು 50ಕ್ಕೂ ಹೆಚ್ಚು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಪ್ರಸ್ತುತ ನವದೆಹಲಿಯಲ್ಲಿ ವಾಸವಿದ್ದಾರೆ.

**ಡಿ.ಎನ್. ಶ್ರೀನಾಥ್**

ಕನ್ನಡ ಮತ್ತು ಹಿಂದಿಯಿಂದ ಪರಸ್ಪರ ಅನುವಾದ ಮಾಡುತ್ತಿರುವ ಶ್ರೀನಾಥರ 95 ಅನುವಾದಿತ ಪುಸ್ತಕಗಳು ಪ್ರಕಟಗೊಂಡಿವೆ. ಪ್ರಸ್ತುತ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.